## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 22.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**(ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಇಲ್ಲ ಎಂದು ತಿಳಿಸಿರುತ್ತಾರೆ).**

**ಪಾಟೀ ಸವಾಲುಃ 1 ರಿಂದ 5 ಮತ್ತು 25 ಪ್ರತಿವಾದಿ ಪರ ಶ್ರೀ.ಆರ್ ಜಿ ಕೆ ವಕೀಲರಿಂದಃ**

ವಾದಿ ನಂ.1 ನನ್ನ ಅಕ್ಕ. ಸದರಿಯವರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ಸಹ ನುಡಿದಿದ್ದರು ಎಂದರೆ ಸಾಕ್ಷಿ ಸಾಕ್ಷಿ ಕೊಟ್ಟ ಬಗ್ಗೆ ಗೊತ್ತಿಲ್ಲ ಆದರೆ ಅವರು ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಪಿಡಬ್ಲ್ಯೂ.1 ಇವರ ಸಾಕ್ಷಿಯನ್ನು ತೆಗೆದು ಹಾಕಿ ಎಂದು ನೀವೇನಾದರೂ ಮೆಮೋ ಸಲ್ಲಿಸಿದ ಬಗ್ಗೆ ನೀವೇನಾದರೂ ತಿಳಿದುಕೊಂಡಿರುತ್ತಿರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಅಷ್ಟು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದಿ ನಂ.1 ತಮ್ಮ ದಿನನಿತ್ಯದ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಆದರೆ ಅವರಿಗೆ ಆರೋಗ್ಯದ ಸಮಸ್ಯೆ ಇದೆ. ಅವರಿಗೆ ಮೊಣಕಾಲು ನೋವು ಇದೆ ಹಾಗೂ ಜಾಸ್ತಿ ಸಮಯ ನಿಲ್ಲಲು ಆಗುವುದಿಲ್ಲ. ಆ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ವಾದಿ ನಂ.1 ಇವರನ್ನೇ ಕೇಳಬೇಕು ನನಗೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ ವಾದಿ ನಂ.1 ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದೇವೆ. ಈ ದಾವೆ ಸಲ್ಲಿಸಲು ನಾನು ಹಾಗೂ ನನ್ನ ಅಕ್ಕ ಸೇರಿಯೆ ಮಾಹಿತಿ ನೀಡಿರುತ್ತೇವೆ.

2. ದಾವೆಯಲ್ಲಿ ಕಾಣಿಸಿರುವ 140 ಆಸ್ತಿಗಳು ನನ್ನ ತಂದೆ ತಾಯಿ, ನನ್ನ ಅಣ್ಣತಮ್ಮಂದಿರ ಹೆಸರಿನಲ್ಲಿ ಇವೆ. ಎಲ್ಲ ಆಸ್ತಿಗಳು ನಮಗೆ ಕೃಷಿ ಜಮೀನಿನಿಂದ ಬಂದ ಉತ್ಪನ್ನದಿಂದ ಬಂದಿರುತ್ತವೆ. ಕೃಷಿ ಜಮೀನಿನಿಂದ ಎಷ್ಟು ಉತ್ಪನ್ನ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆತನದ ಮೂಲ ಪುರುಷ ನಮ್ಮ ಅಜ್ಜ ಬಸಪ್ಪ. ಸದರಿ ಬಸಪ್ಪನಿಗೆ ನಾಲ್ಕು ಜನ ಗಂಡು ಮಕ್ಕಳು ಎಂದರೆ ಸರಿ. ಅವರೆಂದರೆ 1.ಪರಪ್ಪ, 2.ಮರಿಯಪ್ಪ, 3.ಮಹಾದೇವಪ್ಪ ಮತ್ತು 4.ಶೇಖರಪ್ಪ. ಸದರಿಯವರು ನಿಮ್ಮ ಅಜ್ಜ ಜೀವಂತವಿರುವಾಗಲೇ

1975 ರಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿರುವ ಪ್ರಕಾರ 1950 ರಲ್ಲಿಯೇ ಅವರು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸರ್ವೆ ನಂ.539/1 ಆಸ್ತಿ 14 ಎಕರೆ 15 ಗುಂಟೆ ಜಮೀನು ಯಾರ ಹೆಸರಿನಲ್ಲಿದೆ ಎಂದು ನನಗೆ ಅಷ್ಟು ಮಾಹಿತಿ ಇಲ್ಲ. ಸದರಿ ಆಸ್ತಿ ಯಾರಿಂದ ಬಂದಿರುತ್ತದೆ ಎಂದು ನೀವು ಅದನ್ನು ಈ ದಾವೆಯಲ್ಲಿ ಸೇರಿಸಿರುತ್ತಿರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಅವರು ಹಾಜರಪಡಿಸಿದ ದಾಖಲೆಗಳನ್ನು ತೋರೀಸಲಾಗಿ ಅವುಗಳನ್ನು ನೋಡಿ ತಾನು ಸಾಕ್ಷಿ ನುಡಿಯುತ್ತೇನೆಂದು ನುಡಿಯುತ್ತಾರೆ.

(**ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ 1 ರಿಂದ 5 ಮತ್ತು 25 ಪ್ರತಿವಾದಿ ಪರ ಶ್ರೀ.ಆರ್ ಜಿ ಕೆ ವಕೀಲರು ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು**).

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**